

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**,ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 28-09-2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ನಾನು ವಿದೇಶಗಳಿಗೆ ಪ್ರಯಾಣಿಸುವುದಕ್ಕೆ ಮೊದಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರ ಪೈಕಿ ಬದರ್ ಯುದ್ಧದಲ್ಲಿ ಭಾಗವಹಿಸಿದವರ ಚರಿತ್ರೆಗೆ ಸಂಬಂಧಿಸಿದ ಘಟನೆಗಳನ್ನು ವಿವರಿಸುತ್ತಿದ್ದೆನು. ಇಂದು ಅದೇ ವಿಷಯವನ್ನು ಪುನಃ ಪ್ರಾರಂಭಿಸಲಾಗುವುದು. ಇಂದು ನಾನು ವಿವರಿಸುವ ಸಹಾಬರಲ್ಲಿ ಒಬ್ಬರು ಹಝ್ರತ್ ಉಮ್ಮಾರ ರಝಿಯಲ್ಲಾಹು ಅನ್‌ಹು. ಬೈಅತ್ ಅಖಬ ಸಾನಿಯದಲ್ಲಿ ಭಾಗವಹಿಸಿದವರಲ್ಲಿ ಒಬ್ಬರಾಗಿದ್ದರು. ಅವರ ಸಹೋದರ ಹಝ್ರತ್ ಅಮರ್ ಬಿನ್ ಹಝ್ಮ್ ಮತ್ತು ಹಝ್ರತ್ ಮುಅಮ್ಮರ್ ಬಿನ್ ಹಝ್ಮ್ ಸಹಾಬರಾಗಿದ್ದರು. ಬದರ್, ಉಹುದ್ ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಹಝ್ರತ್ ಉಮ್ಮಾರ ಭಾಗವಹಿಸಿದ್ದರು. ಮಕ್ಕದ ವಿಜಯದ ದಿನ ಬನೂ ಮಾಲಿಕ್ ಬಿನ್ ನಜ್ಜಾರ್ ಗೋತ್ರದ ಪತಾಕೆ ಅವರ ಕೈಯ್ಯಲ್ಲಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದ ನಂತರ ಧರ್ಮತ್ಯಾಗಿಗಳ ವಿದ್ರೋಹದ ವಿರುದ್ಧ ಯುದ್ಧದಲ್ಲಿ ಅವರು ಹಝ್ರತ್ ಖಾಲಿದ್ ಬಿನ್ ವಲೀದರ ಜೊತೆ ಸೇರಿ ಹೋರಾಡಿದ್ದರು. ಯಮಾಮ ಯುದ್ಧದಲ್ಲಿ ಅವರು ಶಹೀದರಾದರು. ಅವರ ತಾಯಿಯ ಹೆಸರು ಖಾಲಿದ ಬಿನ್ತ್ ಅನಸ್ ಎಂದಾಗಿತ್ತು. ಅಬೂಬಕರ್ ಬಿನ್ ಮುಹಮ್ಮದ್ ಹೇಳುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ಸಹ್‌ಲ್‌ರನ್ನು ಸರ್ಪ ಕಚ್ಚಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಹಝ್ರತ್ ಉಮ್ಮಾರ ಬಿನ್ ಹಝ್ಮ್‌ರ ಬಳಿ ಕರೆದುಕೊಂಡು ಹೋಗಿ ಅವರಿಂದ ರೋಗ ಶಮನಕ್ಕೋಸ್ಕರ ಊದಿಸಲು ಹೇಳಿದರು. ಅಲ್ಲಾಹನು ಆ ಮೂಲಕ ರೋಗಶಮನ ನೀಡಲಿ ಎಂದು ಆಶಿಸಿದರು. ತಬೂಕ್ ಯುದ್ಧಕ್ಕೋಸ್ಕರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೋಗುತ್ತಿದ್ದಾಗ ಮಾರ್ಗಮಧ್ಯದಲ್ಲಿ ಒಂದು ಸ್ಥಳದಲ್ಲಿ ಅವರ ಒಂಟೆಯಾದ ಖುಸ್‌ವಾ ಕಾಣೆಯಾಯಿತು. ಸಹಾಬರು ಅದನ್ನು ಹುಡುಕಲು ಹೊರಟರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಹಝ್ರತ್ ಉಮ್ಮಾರ ಬಿನ್ ಹಝ್ಮ್ ಸಹ ಇದ್ದರು. ಹಝ್ರತ್ ಉಮ್ಮಾರರ ಒಂಟೆಯ ಮೇಲಿರಿಸಲಾದ ಆಸನದಲ್ಲಿ ಝೈದ್ ಬಿನ್ ಸಲತ್ ಎಂಬವನಿದ್ದನು. ಅವನು ಯಹೂದಿಯಾಗಿದ್ದು ಅನಂತರ ಮುಸ್ಲಿಮನಾಗಿದ್ದರೂ ಹೃದಯದಲ್ಲಿ ಕಪಟ ವಿಶ್ವಾಸ ಹೊಂದಿದವನಾಗಿದ್ದನು. ಅವನು ಹೇಳತೊಡಗಿದನು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಾನು ಪ್ರವಾದಿ ಎಂದು ವಾದಿಸುತ್ತಾರೆ ಮತ್ತು ತಾನು ಆಕಾಶದಿಂದ ಸಮಾಚಾರ ಗಳಿಸಿ ನಿಮಗೆ ತಿಳಿಸುತ್ತಾರೆಂದು ಹೇಳುತ್ತಾರೆ. ಆದರೆ ಅವರ ಒಂಟೆ ಎಲ್ಲಿಗೆ ಹೋಯಿತು ಎಂದು ಅವರಿಗೆ ತಿಳಿಯುವುದಿಲ್ಲ. ಅವನ ಈ ಮಾತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹೇಗೆಯೋ ತಲಪಿತು. ಅವರು ಹೇಳಿದರು: ಅಲ್ಲಾಹನಾಣೆ! ಅಲ್ಲಾಹನು ನನಗೆ ತಿಳಿಸುವ ವಿಷಯಗಳ ಹೊರತು ಬೇರೆ ಏನೂ ನನಗೆ ತಿಳಿದಿಲ್ಲ. ಅನಂತರ ಅವರು ಹೇಳಿದರು: ಈ ಕಪಟವಿಶ್ವಾಸಿಯ ಬಾಯಿ ಮುಚ್ಚಿಸಲಿಕ್ಕಾಗಿ ಅಲ್ಲಾಹನು ನನಗೆ ನನ್ನ ಒಂಟೆಯ ಬಗ್ಗೆ ತಿಳಿಸಿರುವನು. ಅದು ಈಗ ಇಂತಿಂತಹ ಕಣಿವೆ ಪ್ರದೇಶದಲ್ಲಿದೆ. ಅವರು ಒಂದು ಕಣಿವೆ ಪ್ರದೇಶದ ಕಡೆಗೆ ಸೂಚಿಸಿದರು. ಒಂಟೆಯ ಹಗ್ಗ ಒಂದು ಮರಕ್ಕೆ ಸಿಲುಕಿಕೊಂಡಿದೆ. ನೀವು ಹೋಗಿ ಅದನ್ನು ನನ್ನ ಬಳಿಗೆ ತನ್ನಿರಿ ಎಂದು ಹೇಳಿದರು. ಸಹಾಬರು ಹೋಗಿ ಅದನ್ನು ತಂದರು. ಆಗ ಹಝ್ರತ್ ಉಮ್ಮಾರ, ಝೈದ್ ಬಿನ್ ಸಲತನ ಕೊರಳನ್ನು ಹಿಡಿದೆಳೆದು ತನ್ನ ಸಂಗಡಿಗರೊಂದಿಗೆ ಹೇಳಿದರು: ಓ ಅಲ್ಲಾಹನ ದಾಸರೆ ನನ್ನ ಒಂಟೆಯ ಮೇಲೆ ಒಂದು ಸರ್ಪವಿತ್ತು ನಾನು ಅದನ್ನು ಹೊರಗೆಸೆಯುವ ಬಗ್ಗೆ ಅಜ್ಞಾತನಾಗಿದ್ದೆ. ಅನಂತರ ಅವರು ಝೈದನೊಂದಿಗೆ ಹೇಳಿದರು: ಇನ್ನು ಮುಂದೆ ನಿನ್ನೊಂದಿಗೆ ನನ್ನ ಯಾವ ಸಂಬಂಧವೂ ಇಲ್ಲ.

ನಾನು ಪ್ರಸ್ತಾಪಿಸಲಿರುವ ಎರಡನೆಯ ಸಹಾಬಿ ಆದ್ಯಕಾಲದಲ್ಲಿಯೇ ಮುಸ್ಲಿಮರಾದವರಾಗಿದ್ದರು. ಅವರ ಹೆಸರು ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್. ಅವರು ಹೇಳುತ್ತಾರೆ: ನಾನು ಇಸ್ಲಾಮ್ ಧರ್ಮಕ್ಕೆ ಪ್ರವೇಶಿಸಿದ ಆರನೆಯ ವ್ಯಕ್ತಿಯಾಗಿದ್ದೆನು. ಆಗ ಭೂಲೋಕದಲ್ಲಿ ನಾವು ಆರು ಮಂದಿಯ ಹೊರತು ಬೇರೆ ಯಾರೂ ಮುಸ್ಲಿಮರಾಗಿರಲಿಲ್ಲ. ಅವರು ಇಸ್ಲಾಮ್ ಧರ್ಮ ಸ್ವೀಕರಿಸಿದ ಘಟನೆಯನ್ನು ಹೀಗೆ ವಿವರಿಸುತ್ತಾರೆ: ಒಂದು ದಿನ ನಾನು ಉಖ್‌ಬಾ ಬಿನ್ ಮುಈತನ ಆಡುಗಳನ್ನು ಮೇಯಿಸುತ್ತಿದ್ದೆ. ಆಗ ಅಲ್ಲಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗಮಿಸಿದರು. ಹಝ್ರತ್ ಅಬೂಬಕರ್ ಸಹ ಅವರ ಜೊತೆಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ಓ ಬಾಲಕ, ನಿನ್ನ ಹತ್ತಿರ ಹಾಲಿದೆಯೋ. ನಾನು ಹೇಳಿದೆ: ಹಾಲಿದೆ ಆದರೆ ನಾನು ಅವರ ಅಮೀನ್ ಆಗಿರುವ ಕಾರಣ ಅದನ್ನು ನಿಮಗೆ ಕೊಡಲಾರೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಗರ್ಭಿಣಿಯಲ್ಲದ ಯಾವುದಾದರೊಂದು ಹೆಣ್ಣಾಡನ್ನು ನನ್ನ ಬಳಿ ತಾ. ನಾನು ಒಂದು ಹೆಣ್ಣಾಡನ್ನು ಅವರ ಬಳಿಗೆ ತಂದೆನು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು

ಅದರ ಕಾಲು ಕಟ್ಟಿ ಅದರ ಮೊಲೆಯ ಮೇಲೆ ಸವರಲು ಪ್ರಾರಂಭಿಸಿದರು. ಮತ್ತು ಪ್ರಾರ್ಥನೆ ಮಾಡಿದರು. ಆಗ ಆಡಿನ ಮೊಲೆಗಳಿಂದ ಹಾಲು ಸುರಿಯಲು ಪ್ರಾರಂಭವಾಯಿತು. ಆಗ ಹಝ್ರತ್ ಅಬೂಬಕರ್ ಒಂದು ಪಾತ್ರೆ ತಂದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಾಲನ್ನು ಆ ಪಾತ್ರೆಗೆ ಹಿಂಡಿದರು. ಅವರು ಹಝ್ರತ್ ಅಬೂಬಕರ್‌ರೊಂದಿಗೆ ಹಾಲನ್ನು ಕುಡಿಯಲು ಹೇಳಿದರು. ಹಝ್ರತ್ ಅಬೂಬಕರ್ ಹಾಲು ಕುಡಿದರು. ಅನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಾಲನ್ನು ಕುಡಿದರು. ಅನಂತರ ಆಡಿನ ಮೊಲೆಗಳ ಮೇಲೆ ಕೈಯ್ಯನ್ನು ಸವರಿ ಹೇಳಿದರು: ಕುಗ್ಗು ಎಂದು. ಅನಂತರ ಆಡಿನ ಮೊಲೆ ಮೊದಲಿದ್ದ ಹಾಗೆ ಆಯಿತು. ನಾನು ಹೇಳಿದೆ: ಓ ಅಲ್ಲಾಹನ ಸಂದೇಶವಾಹಕರೇ, ನೀವು ಪಠಿಸಿದ ವಚನಗಳಿಂದ ಕೆಲವು ನನಗೆ ಕಲಿಸಿರಿ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ತಲೆಯ ಮೇಲೆ ತನ್ನ ಕೈಯಿಂದ ಸವರುತ್ತಾ ಹೇಳಿದರು: ನೀನು ಕಲಿಯುವ ಮತ್ತು ಕಲಿಸುವ ತರುಣನಾಗಿರುವೆ. ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಅನಂತರ ಎಪ್ಪತ್ತು ಸೂರತ್‌ಗಳನ್ನು ಕಲಿತೆನು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆದಿದ್ದಾರೆ: ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಖುರೈಶಿ ಗೋತ್ರದವರಾಗಿರಲಿಲ್ಲ. ಅವರು ಹಝೀಲ್ ಗೋತ್ರದೊಂದಿಗೆ ಸಂಬಂಧ ಹೊಂದಿದ್ದರು. ಅವರು ಬಹಳ ಬಡವರಾಗಿದ್ದು ಖುರೈಶಿ ಗೋತ್ರದ ಶ್ರೀಮಂತ ವ್ಯಕ್ತಿ ಅಖಬ ಬಿನ್ ಅಬೀ ಮುಈತ್‌ರವರ ಆಡುಗಳನ್ನು ಮೇಯಿಸುತ್ತಿದ್ದರು. ಮುಸ್ಲಿಮರಾದ ನಂತರ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೇವಕರಾದರು. ಅವರ ಸಹವಾಸದಲ್ಲಿ ಅವರು ಬಹಳ ಶ್ರೇಷ್ಠ ವಿದ್ವಾಂಸರಾದರು. ಹನಫೀ ಕರ್ಮಶಾಸ್ತ್ರದ ಅಸ್ತಿಭಾರ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರ ಹೇಳಿಕೆಗಳು ಮತ್ತು ನಿಷ್ಕರ್ಷೆಗಳ ಮೇಲಿದೆ. ಪವಿತ್ರ ಖುರ್‌ಆನ್ ಓದಲು ಮತ್ತು ಕಲಿಯಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಉಪದೇಶಿಸಲ್ಪಟ್ಟ ನಾಲ್ವರು ಸಹಾಬರಲ್ಲಿ ಅವರ ಹೆಸರು ಮೊದಲಿನ ಸ್ಥಾನದಲ್ಲಿದೆ. ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: **ಖುಝುಲ್ ಖುರ್‌ಆನ ಮಿನ್ ಅರ್‌ಬಅತಿನ್, ಮಿನ್ ಅಬ್‌ದಿಲ್ಲಾಹಿಬ್‌ನಿ ಮಸ್‌ಊದಿ ವ ಸಾಲಿಮಿ ವ ಮುಆಝಿಬ್‌ನಿ ಜಬಲ್ ವ ಅಬೀ ಬಿನ್ ಕಅಬ್.** ಪವಿತ್ರ ಖುರ್‌ಆನನ್ನು ಕಲಿಯಲು ಇಚ್ಛಿಸುವವರು ಈ ನಾಲ್ವರಿಂದ ಕಲಿತುಕೊಳ್ಳಲಿ. ಅಬ್ದುಲ್ಲಾ ಬಿನ್ ಮಸ್‌ಊದ್, ಸಾಲಿಮ್, ಮುಆಝ್ ಬಿನ್ ಜಬಲ್ ಮತ್ತು ಅಬೀ ಬಿನ್ ಕಅಬ್‌ರಿಂದ. ಹದೀಸಿನಲ್ಲಿ ಒಂದು ವರದಿ ಹೀಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಪ್ರಥಮ ಬಾರಿ ಬಹಿರಂಗವಾಗಿ ಪವಿತ್ರ ಖುರ್‌ಆನನ್ನು ಮಕ್ಕದಲ್ಲಿ ಉಚ್ಚ ಧ್ವನಿಯಲ್ಲಿ ಪಠಿಸಿದವರು ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಆಗಿದ್ದರು. ಆ ಘಟನೆಗೆ ಸಂಬಂಧಿಸಿ ಹೀಗೆ ವಿವರಿಸಲಾಗುತ್ತಿದೆ. ಒಮ್ಮೆ ಸಹಾಬರು ಜಮಾಯಿಸಿ ಹೀಗೆ ಚರ್ಚಿಸುತ್ತಿದ್ದರು. ಖುರೈಶಿ ಗೋತ್ರದ ಜನರು ಪವಿತ್ರ ಖುರ್‌ಆನ್ ಪಠಿಸುವುದನ್ನು ಎಂದೂ ಆಲಿಸಿಲ್ಲ. ಯಾರಾದರೂ ಅವರ ಮುಂದೆ ಉಚ್ಚ ಸ್ವರದಿಂದ ಪಠಿಸಲು ಸಿದ್ಧರಿದ್ದಾರೆಯೇ? ಆಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳಿದರು: ನಾನು ಪವಿತ್ರ ಖುರ್‌ಆನ್ ಪಠಿಸಿ ಕೇಳಿಸುವೆನು ಎಂದು. ಆಗ ಜನರು ಹೇಳಿದರು: ಖುರೈಶಿಗಳು ನಿಮಗೇನಾದರೂ ಹಿಂಸೆ ನೀಡಬಹುದೆಂಬ ಭಯವಿದೆ. ಪ್ರಭಾವಶಾಲಿಯಾದ ಯಾರಾದರೂ ಪವಿತ್ರ ಖುರ್‌ಆನ್ ಪಠಿಸುವುದು ಉತ್ತಮವಾಗುವುದು. ಏಕೆಂದರೆ ಖುರೈಶಿಗಳು ಆ ವ್ಯಕ್ತಿಗೆ ಹಾನಿ ಉಂಟುಮಾಡಲು ಪ್ರಯತ್ನಿಸಿದರೂ ಅವನ ಗೋತ್ರದ ಜನರು ಅವನನ್ನು ರಕ್ಷಿಸುವರು. ಆಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳಿದರು: ನೀವು ನನ್ನ ಬಗ್ಗೆ ಚಿಂತಿಸಬೇಡಿರಿ. ನನ್ನನ್ನು ಅಲ್ಲಾಹನು ರಕ್ಷಿಸುವನು. ಆ ಸಹಾಬರದಲ್ಲಿ ವಿಸ್ಮಯಕರ ಉತ್ಸಾಹವಿತ್ತು. ಮರುದಿನ ಸುರ್ಯೋದಯವಾಗಿ ಸ್ವಲ್ಪ ಹೊತ್ತಿನ ನಂತರ ಕಅಬದ ಸಮೀಪವಿರುವ ಮಖಾಮೇ ಇಬ್ರಾಹೀಮ್ ಎಂಬ ಸ್ಥಳಕ್ಕೆ ತಲಪಿ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಉಚ್ಚ ಧ್ವನಿಯಿಂದ ಪವಿತ್ರ ಖುರ್‌ಆನ್ ಪಠಿಸಲು ತೊಡಗಿದರು. **ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ ಅರ್ರಹ್ಮಾನು ಅಲ್ಲಮಲ್ ಖುರ್‌ಆನ್** ಎಂದು ಪಠಿಸಲು ಪ್ರಾರಂಭಿಸಿದಾಗ ಅಲ್ಲಿಯೇ ಗುಂಪಾಗಿ ಕುಳಿತಿದ್ದ ಖುರೈಶಿಗಳಿಗೆ ಆಶ್ಚರ್ಯವಾಯಿತು. ಅವರ ಪೈಕಿ ಕೆಲವರು ಹೇಳಿದರು: ಇದು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪಠಿಸುತ್ತಾ ಇದ್ದುದೇ ಆಗಿದೆ. ಆಗ ಖುರೈಶಿಗಳೆಲ್ಲರೂ ಎದ್ದು ನಿಂತು ಅಬ್ದುಲ್ಲಾ ಬಿನ್ ಮಸ್‌ಊದರ ಮುಖಕ್ಕೆ ಹೊಡೆಯಲು ತೊಡಗಿದರು. ಆದರೆ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಪಠಿಸುವುದನ್ನು ನಿಲ್ಲಿಸಲಿಲ್ಲ. ಅವರು ಉದ್ದೇಶಿಸಿದಷ್ಟು ಪಠಿಸಿದ ನಂತರ ನಿಲ್ಲಿಸಿದರು. ಅನಂತರ ಅವರು ಸಹಾಬರ ಬಳಿಗೆ ಹೋದಾಗ ಅವರ ಮುಖಕ್ಕೆ ಅವಿಶ್ವಾಸಿಗಳು ಹೊಡೆದ ಕಾರಣದಿಂದ ಉಂಟಾದ ಬಾಸುಂಡೆಗಳನ್ನು ನೋಡಿದಾಗ ಸಹಾಬರು ಹೇಳಿದರು: ನಿಮಗೆ ಅವಿಶ್ವಾಸಿಗಳು ಹೊಡೆಯುವರೆಂಬ ಭಯ ನಮಗಿತ್ತು. ಆಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳಿದರು: ಅಲ್ಲಾಹನ ಈ ಶತ್ರುಗಳು ನನಗೆ ಹೊಡೆಯುತ್ತಿದ್ದಾಗ ನನ್ನ ದೃಷ್ಟಿಯಲ್ಲಿ ಅವರು ಎಷ್ಟು ನಿಸ್ಸಾರವಾಗಿ ಗೋಚರಿಸಿದರೆಂದರೆ ಅದರ ಮೊದಲು ಎಂದೂ ಹಾಗೆ ಗೋಚರಿಸಿರಲಿಲ್ಲ. ನೀವು ಇಚ್ಛಿಸುವುದಾದರೆ ನಾಳೆ ಸಹ ಹಾಗೆಯೇ ಪವಿತ್ರ ಖುರ್‌ಆನ್ ಪಠಿಸಲು ಸಿದ್ಧನಾಗುವೆನು. ಸಹಾಬರು ಹೇಳಿದರು: ಇನ್ನು ಬೇಡ. ಇಷ್ಟೇ ಸಾಕು. ಅವರು ಆಲಿಸಲು ಇಚ್ಛಿಸದೆ ಇದ್ದುದನ್ನು ಅವರು ಆಲಿಸುವಂತೆ ನೀವು ಮಾಡಿದಿರಿ.

ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಮುಸ್ಲಿಮರಾದ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ತನ್ನ ಬಳಿ ಇರಿಸಿದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೇವಕರಾಗಿ ವರ್ತಿಸುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರೊಂದಿಗೆ ಹೀಗೆ ಹೇಳಿದ್ದರು: ನೀವು ನನ್ನ ಧ್ವನಿಯನ್ನು

ಆಲಿಸಿದಾಗಲೆಲ್ಲಾ ಮನೆಯಲ್ಲಿ ಪರದೆ ಹಾಕಿರದಿದ್ದಾಗಲೆಲ್ಲಾ ಅನುಮತಿ ಪಡೆಯದೆ ಮನೆಯೊಳಗೆ ಬರಬೇಕು. ಅವರು ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಪ್ರತಿಯೊಂದು ಕೆಲಸ ಮಾಡುತ್ತಿದ್ದರು. ಅವರು ಪಾದರಕ್ಷೆ ಧರಿಸಲು ಸಹ ಸಹಾಯ ಮಾಡುತ್ತಿದ್ದರು. ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೋಗುವ ಆವಶ್ಯಕತೆ ಇದ್ದಾಗ ಹೋಗುತ್ತಿದ್ದರು. ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ನಾನ ಮಾಡುವಾಗ ಅವರು ಪರದೆ ಎತ್ತಿ ಹಿಡಿದು ನಿಲ್ಲುತ್ತಿದ್ದರು. ಹರ್ಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ರಹಸ್ಯಗಳನ್ನು ಬಲ್ಲವರೂ ಅವರ ಹಾಸಿಗೆ ಹಾಸುವವರೂ ಅವರ ಹಲ್ಲುಜ್ಜುವ ಮಿಸ್‌ವಾಕ್ ಮತ್ತು ಪಾದರಕ್ಷೆಗಳನ್ನು ತೆಗೆದಿಟ್ಟುಕೊಳ್ಳುವವರೂ ಆಗಿದ್ದರು. ಅವರು ವುಝು ಮಾಡಲು ನೀರನ್ನು ತಂದುಕೊಡುತ್ತಿದ್ದರು. ಅಬೂ ಮಲೀಹ್ ವರದಿ ಮಾಡುತ್ತಾರೆ: ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ನಾನ ಮಾಡುವಾಗ ಹರ್ಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಪರದೆಯನ್ನು ಎತ್ತಿ ಹಿಡಿಯುತ್ತಿದ್ದರು. ಅವರು ನಿದ್ರಿಸುವಾಗ ಎಬ್ಬಿಸುವವರಾಗಿದ್ದರು. ಅವರ ಜೊತೆ ಪ್ರಯಾಣ ಮಾಡುವಾಗ ಶಸ್ತ್ರ ಸಜ್ಜಿತರಾಗಿ ಹೋಗುತ್ತಿದ್ದರು.

ಹರ್ಝ್ರತ್ ಅಬೂ ಮೂಸಾ ವರದಿ ಮಾಡುತ್ತಾರೆ: ನಾವು ಯಮನ್‌ನಿಂದ ಆಗಮಿಸಿದಾಗ ಹರ್ಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್‌ರನ್ನು ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಹ್ಲೆಬೈತ್ (ಕುಟುಂಬದ ಸದಸ್ಯ) ಎಂದೇ ಭಾವಿಸುತ್ತಿದ್ದೆವು. ಏಕೆಂದರೆ ಅವರು ಮತ್ತು ಅವರ ತಾಯಿ ಬಹಳ ಹೆಚ್ಚು ಸಾರಿ ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮನೆಗೆ ಹೋಗುತ್ತಾ ಬರುತ್ತಾ ಇದ್ದರು. ಹರ್ಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಎರಡು ಹಿಜ್‌ರತ್‌ಗಳಲ್ಲೂ ಭಾಗವಹಿಸಿದ್ದರು. ಅಬಿಸೀನಿಯಾದ ಹಿಜ್‌ರತ್‌ನಲ್ಲಿಯೂ ಮದೀನದ ಕಡೆಗೆ ಹಿಜ್‌ರತ್‌ನಲ್ಲಿಯೂ. ಅವರು ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿಯೂ ಬೈಅತ್ ರಿಝ್ವಾನ್‌ನಲ್ಲಿಯೂ ಭಾಗವಹಿಸಿದ್ದರು. ಅನಂತರ ಯರ್‌ಮೂಕ್ ಯುದ್ಧದಲ್ಲಿಯೂ ಭಾಗವಹಿಸಿದ್ದರು. ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು, ಸ್ವರ್ಗ ಲಭಿಸುವ ಶುಭವಾರ್ತೆ ನೀಡಲ್ಪಟ್ಟ ಸಹಾಬರಲ್ಲಿ ಹರ್ಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಸೇರಿದ್ದರು. ಬದರ್ ಯುದ್ಧದಲ್ಲಿ ಅಬೂ ಜಹಲನು ಅಂತಿಮ ಗತಿ ಪಡೆದುದರಲ್ಲಿ ಅವರ ಪಾಲು ಸಹ ಇದೆ. ಹರ್ಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಮದೀನಕ್ಕೆ ಹಿಜ್‌ರತ್ ಮಾಡಿದಾಗ ಹರ್ಝ್ರತ್ ಮುಆಝ್ ಬಿನ್ ಜಬಲ್‌ರ ಮನೆಯಲ್ಲಿ ವಾಸಿಸಲು ತೊಡಗಿದರು. ಹರ್ಝ್ರತ್ ಮುಆಝ್‌ರನ್ನು ಹರ್ಝ್ರತ್ ಅಬ್ದುಲ್ಲಾ ಬಿನ್ ಮಸ್ಊದರ ಧಾರ್ಮಿಕ ಸಹೋದರನನ್ನಾಗಿ ಮಾಡಲಾಗಿತ್ತು. ಮದೀನದ ಜೀವಿತದ ಪ್ರಾರಂಭದ ಕಾಲದಲ್ಲಿ ಅವರ ಆರ್ಥಿಕ ಸ್ಥಿತಿ ಚೆನ್ನಾಗಿರಲಿಲ್ಲ. ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ವಲಸೆ ಹೋದವರಿಗೆ ಮಸ್‌ಜಿದ್ ನಬವೀ ಸಮೀಪ ವಾಸ್ತವ್ಯದ ವ್ಯವಸ್ಥೆ ಮಾಡಿದಾಗ ಬನೂ ಝುಹ್ರಾ ಗೋತ್ರದ ಕೆಲವರು ಹರ್ಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ತಮ್ಮ ಜೊತೆ ವಾಸಿಸುವ ಬಗ್ಗೆ ಅತೃಪ್ತಿ ಸೂಚಿಸಿದರು. ಅವರು ಬಡಕಾರ್ಮಿಕರಾಗಿದ್ದಾರೆ ನಾವು ದೊಡ್ಡ ಅಂತಸ್ತಿನ ಜನರು ಎಂದು ಅವರು ಭಾವಿಸಿದ್ದರು. ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅದರ ಬಗ್ಗೆ ತಿಳಿದಾಗ ಅವರು ಹೇಳಿದರು: ಅಲ್ಲಾಹನು ನನ್ನನ್ನು ನಿಮ್ಮ ಮಧ್ಯೆ ತಾರತಮ್ಯತೆ ಜಾರಿಯಲ್ಲಿರಿಸಲಿಕ್ಕಾಗಿ ನಿಯೋಜಿಸಿರುವನೇ? ನೆನಪಿಡಿರಿ, ಯಾವ ಸಮುದಾಯದಲ್ಲಿ ಬಲಹೀನರಿಗೆ ಅವರ ಹಕ್ಕುಗಳನ್ನು ನೀಡಲಾಗುತ್ತಿಲ್ಲವೋ ಆ ಸಮುದಾಯಕ್ಕೆ ಅಲ್ಲಾಹನು ಎಂದೂ ಅನುಗ್ರಹ ನೀಡಲಾರನು. ಅನಂತರ ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹರ್ಝ್ರತ್ ಅಬ್ದುಲ್ಲಾ ಬಿನ್ ಮಸ್ಊದರಿಗೆ ಮಸ್‌ಜಿದ್ ಸಮೀಪ ವಾಸ ಸ್ಥಳ ನೀಡಿದರು. ಹರ್ಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ವರದಿ ಮಾಡುತ್ತಾರೆ: ಒಮ್ಮೆ ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನೊಂದಿಗೆ ಹೇಳಿದರು. ನನಗೆ ಸೂರತುನ್ನಿಸಾ ಓದಿ ಕೇಳಿಸು. ನಾನು ಹೇಳಿದೆ: ತಮಗೆಯೇ ಅವತೀರ್ಣಗೊಂಡ ಸೂರತನ್ನು ನಾನು ತಮಗೆ ಓದಿ ಹೇಳುವುದಾದರೂ ಏಕೆ? ಆಗ ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅನ್ಯರು ಪಠಿಸುವಾಗ ಪವಿತ್ರ ಖುರ್‌ಆನ್ ಆಲಿಸುವುದನ್ನು ನಾನು ಇಷ್ಟಪಡುತ್ತೇನೆ. ಹರ್ಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಹೇಳುತ್ತಾರೆ: ನಾನು ಪಠಿಸಲು ಪ್ರಾರಂಭಿಸಿ ಈ ವಚನವನ್ನು ತಲಪಿದೆ: **ಫ ಕೈಫ ಇಝಾ ಜಿಅ್‌ನಾ ಮಿನ್‌ಕುಲ್ಲಿ ಉಮ್ಮತಿನ್ ಬಿ ಶಹೀದಿನ್, ವಜಿಅ್‌ನಾ ಬಿಕ ಅಲಾ ಹಾಉಲಾಯಿ ಶಹೀದಾ.** ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬೊಬ್ಬ ಸಾಕ್ಷಿಯನ್ನು ತಂದು, ಇವರಿಗೆ ಸಾಕ್ಷಿಯಾಗಿ ನಿನ್ನನ್ನೂ ತರುವಾಗ (ಇವರ) ಸ್ಥಿತಿ ಏನಾಗಿರಬಹುದು. (4:42) ಆಗ ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಣ್ಣುಗಳಿಂದ ಅಶ್ರುಧಾರೆ ಜಾರಿಗೊಂಡಿತು. ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಆಗ ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಪಠಿಸುವುದನ್ನು ನಿಲ್ಲಿಸು. ಇನ್ನೊಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಪವಿತ್ರ ಖುರ್‌ಆನ್ ಅವತೀರ್ಣವಾಗುವಾಗ ಇದ್ದ ತಾಜಾ ಸ್ಥಿತಿಯಲ್ಲಿಯೇ ಪವಿತ್ರ ಖುರ್‌ಆನನ್ನು ಆಲಿಸಲು ಯಾರಾದರೂ ಬಯಸುವುದಾದರೆ ಅಂತಹ ವ್ಯಕ್ತಿ ಅಬ್ದುಲ್ಲಾ ಬಿನ್ ಮಸ್ಊದರಿಂದ ಪವಿತ್ರ ಖುರ್‌ಆನನ್ನು ಕಲಿಯಬೇಕು. ಹರ್ಝ್ರತ್ ಅಬ್ದುರ್ರಹ್ಮಾನ್ ಬಿನ್ ಯಝೀದ್ ವರದಿ ಮಾಡುತ್ತಾರೆ: ನಾವು ಹರ್ಝ್ರತ್ ಹುಝೈಫರ ಬಳಿಗೆ ಹೋಗಿ ಹೇಳಿದೆವು: ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ರೀತಿ ನೀತಿಗಳನ್ನು ಸಮೀಪದಿಂದ ವೀಕ್ಷಿಸಿದ ವ್ಯಕ್ತಿಯನ್ನು ಪರಿಚಯಿಸಿರಿ. ಆ ವ್ಯಕ್ತಿ ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆ ನಡೆವಳಿಕೆಗಳನ್ನು ಅನುಸರಿಸುವವರೂ ಮತ್ತು ಅವರ ಕೆಲಸಗಳನ್ನೇ ಅನುಸರಿಸಿ ವರ್ತಿಸುವವರೂ ಆಗಿರಬೇಕು. ನಾವು ಅಂತಹ ವ್ಯಕ್ತಿಯಿಂದ

ಜ್ಞಾನಗಳಿಸುವಂತಾಗಲಿ ಮತ್ತು ಹದೀಸುಗಳನ್ನು ಆಲಿಸುವಂತಾಗಲಿ. ಆಗ ಹಝ್ರತ್ ಹುಝೈಫ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳನ್ನು ಸಮೀಪದಿಂದ ವೀಕ್ಷಿಸಿದವರು ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಆಗಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಾ ಇದ್ದರು: ಅಬ್ದುಲ್ಲಾ ಬಿನ್ ಮಸ್ಊದರಿಗೆ ಇಷ್ಟಕರವಾದ ವಿಷಯಗಳನ್ನೇ ನಾನು ನನ್ನ ಸಮುದಾಯದವರಿಗೆ ಇಷ್ಟಪಡುತ್ತೇನೆ.

ಹಝ್ರತ್ ಅಲ್‌ಖಮ ವರದಿ ಮಾಡುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದರ ವರ್ತನೆಯ ರೀತಿಗಳು, ಅವರ ಸುಸ್ವಭಾವಗಳು, ಅವರ ಮಧ್ಯವರ್ತಿ ನಿಲುವುಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಾದೃಶ್ಯ ಹೊಂದಿದವುಗಳಾಗಿದ್ದುವು. ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದರ ಪುತ್ರ ಉಬೈದುಲ್ಲಾ ಹೇಳುತ್ತಾರೆ: ರಾತ್ರಿ ಹೊತ್ತು ಅನ್ಯರು ನಿದ್ರಿಸುತ್ತಿದ್ದಾಗ ನನ್ನ ತಂದೆ ತಹಜ್ಜುದ್ ನಿರ್ವಹಿಸಲು ಎದ್ದೇಳುತ್ತಿದ್ದರು. ಒಮ್ಮೆ ರಾತ್ರಿ ಅವರು ಎದ್ದು ಸುಬ್‌ಹ್ ತನಕ ಗುಯಿಂಗುಟ್ಟುತ್ತಾ ನಮಾಝ್ ನಿರ್ವಹಿಸುತ್ತಿದ್ದುದನ್ನು ನಾನು ಕಂಡೆನು. ಅದು ಜೇನುನೊಣಗಳು ಗುಯಿಂಗುಟ್ಟುವ ಹಾಗಿರುತ್ತಿತ್ತು. ಹಝ್ರತ್ ಅಲಿ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ಯಾರಿಂದಲೂ ಸಲಹೆ ಪಡೆಯದೆ ಅಮೀರನಾಗಿ ಯಾರನ್ನಾದರೂ ನಿಯಮಿಸಲು ಬಯಸುತ್ತಿದ್ದರೆ ನಾನು ಅಬ್ದುಲ್ಲಾ ಬಿನ್ ಮಸ್ಊದರನ್ನು ಅಮೀರ್ ಆಗಿ ನೇಮಿಸುತ್ತಿದ್ದೆನು.

ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ತೆಳು ದೇಹದವರೂ ಗಿಡ್ಡ ಗಾತ್ರದವರೂ ಗೋಧಿವರ್ಣದವರೂ ಆಗಿದ್ದರು. ಅವರು ಬಹಳ ಉತ್ತಮ ಪೋಷಾಕು ಧರಿಸುತ್ತಿದ್ದರು. ಸುಗಂಧ ದ್ರವ್ಯಗಳನ್ನು ಸವರುತ್ತಿದ್ದರು. ಹಝ್ರತ್ ಅಲಿ ಹೇಳುತ್ತಾರೆ: ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವುದೋ ಆವಶ್ಯಕತೆಗೋಸ್ಕರ ಅಬ್ದುಲ್ಲಾ ಬಿನ್ ಮಸ್ಊದರೊಂದಿಗೆ ಒಂದು ಮರಕ್ಕೆ ಹತ್ತಲು ಆಜ್ಞೆ ನೀಡಿದರು. ಬಾಹ್ಯವಾಗಿ ಬಲಹೀನವಾಗಿ ಕಾಣುವ ಅವರ ಕಾಲುಗಳನ್ನು ನೋಡಿ ಸಹಾಬರು ನಗಲು ತೊಡಗಿದರು. ಅವರ ಕಾಲುಗಳು ಬಹಳ ತೆಳುವಾಗಿದ್ದುವು, ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀವು ಏಕೆ ನಗುತ್ತಿರುವಿರಿ. ಅಬ್ದುಲ್ಲಾ ಮಾಡಿದ ಒಳಿತುಗಳು ತುಂಬಿದ ತಟ್ಟೆ ಉಹುದ್ ಬೆಟ್ಟಕ್ಕಿಂತ ಹೆಚ್ಚು ಭಾರವುಳ್ಳದ್ದಾಗಿ ಖಿಯಾಮತ್ ದಿನ ಗೋಚರಿಸುವುದು. ಹಝ್ರತ್ ಉಮರ್ ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದರ ಜ್ಞಾನದ ಬಗ್ಗೆ ಹೀಗೆ ಹೇಳಿದರು: ಈ ವ್ಯಕ್ತಿ ಜ್ಞಾನದಿಂದ ತುಂಬಿರುವ ಒಂದು ದೊಡ್ಡ ಪಾತ್ರೆಯಾಗಿರುವರು.

ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದರ ಜ್ಞಾನದ ಉನ್ನತ ಮಟ್ಟವನ್ನು ಈ ಕೆಳಗಿನ ಒಂದು ಘಟನೆಯಿಂದ ಅಂದಾಜು ಮಾಡಬಹುದಾಗಿದೆ. ಹಝ್ರತ್ ಮುಆಝ್ ಬಿನ್ ಜಬಲ್‌ರವರು ನಿಧನ ಹೊಂದುವುದಕ್ಕೆ ಸ್ವಲ್ಪ ಮೊದಲು ಅವರೊಂದಿಗೆ ಏನಾದರೂ ಉಪದೇಶ ನೀಡಲು ಅಪೇಕ್ಷಿಸಲಾಯಿತು. ಅವರು ಹೇಳಿದರು: ಜ್ಞಾನ ಮತ್ತು ವಿಶ್ವಾಸ (ಇಲ್ಮ್ ಮತ್ತು ಈಮಾನ್) ಮಹತ್ವಪೂರ್ಣವಾಗಿದೆ. ಅವುಗಳನ್ನು ಗಳಿಸಲು ಪ್ರಯತ್ನಿಸುವವನು ಯಶಸ್ವಿಯಾಗುತ್ತಾನೆ. ಇಲ್ಮ್ ಮತ್ತು ಈಮಾನ್ ಬಗ್ಗೆ ಕಲಿಯಲು ನಾಲ್ವರು ಅನುಷ್ಠಾನಬದ್ಧ ವಿದ್ವಾಂಸರನ್ನು ಸಮೀಪಿಸಬೇಕೆಂದು ಹಝ್ರತ್ ಮುಆಝ್ ಹೇಳಿದ್ದರು. ಅವರು ಹೆಸರಿಸಿದ ನಾಲ್ವರು ವಿದ್ವಾಂಸರಲ್ಲಿ ಒಬ್ಬರು ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಆಗಿದ್ದರು.

ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಮೃತರಾಗುವ ಮೊದಲು ಕೊನೆಯ ಸಾರಿ ರೋಗಬಾಧಿತರಾಗಿದ್ದಾಗ ಅವರನ್ನು ಹಝ್ರತ್ ಉಸ್ಮಾನ್ ರಳಿಯಲ್ಲಾಹು ಅನ್‌ಹು ಸಂದರ್ಶಿಸಿದಾಗ ಅವರೊಂದಿಗೆ ಕೇಳಿದರು: ತಮಗೇನಾದರೂ ದೂರು ನೀಡಲಿಕ್ಕಿದೆಯೇ? ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಹೇಳಿದರು: ನಾನು ದೂರು ನೀಡುವುದು ನಾನು ಮಾಡಿದ ಪಾಪಕೃತ್ಯಗಳ ಬಗ್ಗೆ ಮಾತ್ರವಾಗಿದೆ. ನಂತರ ಹಝ್ರತ್ ಉಸ್ಮಾನ್ ಕೇಳಿದರು: ತಮಗೆ ಏನಾದರೂ ಆವಶ್ಯಕತೆ ಇದೆಯೇ? ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಹೇಳಿದರು: ನಾನು ಅಲ್ಲಾಹನ ಕಾರುಣ್ಯವನ್ನು ಆಶಿಸುತ್ತೇನೆ. ಹಝ್ರತ್ ಉಸ್ಮಾನ್ ಕೇಳಿದರು: ತಮಗೋಸ್ಕರ ಯಾವುದಾದರೂ ಚಿಕಿತ್ಸಕನನ್ನು ನೇಮಿಸಲಿಯೋ? ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಹೇಳಿದರು: ಚಿಕಿತ್ಸಕನೇ ನನ್ನನ್ನು ರೋಗಿಯಾಗಿ ಮಾಡಿದ್ದಾನೆ. ಎಂದರೆ ಅಲ್ಲಾಹನ ನಿರ್ಧಾರದಿಂದ ನಾನು ತೃಪ್ತನಾಗಿದ್ದೇನೆ. ಮತ್ತೆ ಹಝ್ರತ್ ಉಸ್ಮಾನ್ ಕೇಳಿದರು: ನಿಮಗೆ ಸಹಾಯಧನ ಏನಾದರೂ ನಿಶ್ಚಯಿಸಬೇಕೇ? ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಹೇಳಿದರು: ನನಗೆ ಅದರ ಆವಶ್ಯಕತೆ ಇಲ್ಲ. ಹಝ್ರತ್ ಉಸ್ಮಾನ್ ಹೇಳಿದರು: ತಮ್ಮ ಪುತ್ರಿಯರಿಗೆ ಅದು ಸಹಾಯಕವಾಗುವುದು. ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್ ಹೇಳಿದರು: ನನ್ನ ಪುತ್ರಿಯರು ತಮ್ಮ ಆಶ್ರಯ ಬೇಡುವರೆಂಬ ಆತಂಕ ತಮಗಿದೆಯೇ? ನಾನು ನನ್ನ ಪುತ್ರಿಯರೊಂದಿಗೆ ಹೇಳಿದ್ದೇನೆ ಪ್ರತಿದಿನ ರಾತ್ರಿ ಸೂರತುಲ್ ವಾಖಿಅ ಪಠಿಸಬೇಕೆಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿರುವುದನ್ನು ನಾನು ಕೇಳಿರುವೆನು– ಯಾರು ಪ್ರತಿದಿನ ರಾತ್ರಿ ಹೊತ್ತು ಸೂರತುಲ್ ವಾಖಿಅ ಪಠಿಸುತ್ತಾನೋ ಅವನಿಗೆ ಆಹಾರ ಲಭಿಸದೆ ಬರಿಹೊಟ್ಟೆ ಹೊಂದುವ ವಿಪತ್ತು ಸಂಭವಿಸದು.

ಆ ಹೊಳೆಯುತ್ತಿರುವ ನಕ್ಷತ್ರಗಳು ಹೊಂದಿದ್ದ ತವಕ್ಕುಲ್ ಅಲಲ್ಲಾಹ್ (ಅಲ್ಲಾಹನ ಬಗ್ಗೆ ಭರವಸೆ) ಮತ್ತು ಖನಾಅತ್ (ಇದ್ದುದರಲ್ಲಿ ತೃಪ್ತಿ ಹೊಂದುವ ಸ್ಥಿತಿ) ಆ ರೀತಿ ಇತ್ತು. ಸಲ್ಮಾ ಬಿನ್ ತಮಾಮ್ ಹೇಳುತ್ತಾರೆ: ಒಬ್ಬ ವ್ಯಕ್ತಿ ಹಝ್ರತ್ ಅಬುಲ್ಲಾ ಬಿನ್ ಮಸ್ಊದರನ್ನು ಭೇಟಿಯಾಗಿ ತಾನು ಕಂಡ ಒಂದು ಸ್ವಪ್ನವನ್ನು ವಿವರಿಸಿ ಹೇಳಿದರು: ನಾನು ರಾತ್ರಿ ಸ್ವಪ್ನದಲ್ಲಿ ಕಂಡೆನು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಎತ್ತರವಾದ ವೇದಿಕೆಯಲ್ಲಿ

ಕುಳಿತಿದ್ದಾರೆ. ನೀವು ಅದರ ಕೆಳಗೆ ಇದ್ದೀರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಓ ಇಬ್ನು ಮಸ್‌ಊದ್ ನನ್ನ ಸಮೀಪಕ್ಕೆ ಬಾ. ನೀನು ನನ್ನ ಅನಂತರ ಬಹಳ ನಿರ್ಲಕ್ಷ್ಯತೆ ಹೊಂದಿರುವೆ. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ವಿಚಾರಿಸಿದರು: ಅಲ್ಲಾಹನಾಣೆ ನೀವು ಈ ಸ್ವಪ್ನವನ್ನು ವಾಸ್ತವಿಕವಾಗಿಯೂ ದರ್ಶಿಸಿರುವಿರೇನು? ಆ ವ್ಯಕ್ತಿ ಹೇಳಿದರು: ಹೌದು. ಆಗ ಅವರು ಹೇಳಿದರು: ನೀವು ಮದೀನಕ್ಕೆ ನನ್ನ ನಮಾಝೆ ಜನಾಝ ನಿರ್ವಹಿಸಲು ಬಂದಿರುವಿರೇನು?

ಸ್ವಲ್ಪ ಕಾಲದ ನಂತರ ಅವರು ನಿಧನ ಹೊಂದಿದರು. ಹಿಜರಿ ವರ್ಷ 32ರಲ್ಲಿ ಅವರು ಮದೀನದಲ್ಲಿ ನಿಧನ ಹೊಂದಿದರು. ಹಝ್ರತ್ ಉಸ್ಮಾನ್ ನಮಾಝೆ ಜನಾಝ ನಿರ್ವಹಿಸಿದರು. ಅವರ ಮೃತ ಶರೀರವನ್ನು ಜನ್ನತುಲ್ ಬಖೀಅ್ ಖಬರಸ್ಥಾನದಲ್ಲಿ ದಫನ ಗೊಳಿಸಲಾಯಿತು. ಮೃತರಾಗುವಾಗ ಅವರ ಪ್ರಾಯ 60ಕ್ಕಿಂತ ಸ್ವಲ್ಪ ಹೆಚ್ಚಿಗೆ ಇತ್ತು. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ನಿಧನ ಹೊಂದಿದಾಗ ಹಝ್ರತ್ ಅಬೂ ಮೂಸಾರವರು ಹಝ್ರತ್ ಅಬೂ ಮಸ್‌ಊದರೊಂದಿಗೆ ಹೇಳಿದರು: ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ತನ್ನ ಹಿಂದೆ ತನ್ನ ಹಾಗೆಯೇ ಒಳಿತುಗಳನ್ನು ಹೊಂದಿದ ಯಾರನ್ನಾದರೂ ಬಿಟ್ಟು ಹೋಗಿರುವರೇ? ಹಝ್ರತ್ ಅಬೂ ಮಸ್‌ಊದ್ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಾಸಸ್ಥಳಕ್ಕೆ ಪ್ರವೇಶಿಸಲು ನಮಗೆ ಅನುಮತಿ ಲಭಿಸದೆ ಇದ್ದಾಗ ಸಹ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರಿಗೆ ಪ್ರವೇಶಾನುಮತಿ ದೊರಕುತ್ತಿತ್ತು. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪದಿಂದ ದೂರ ಸರಿದು ಹೋದಾಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸೇವೆ ಸಲ್ಲಿಸುವ ಭಾಗ್ಯ ಪಡೆಯುತ್ತಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹವಾಸದ ಅನುಗ್ರಹ ಪಡೆಯುತ್ತಿದ್ದರು. ಹೀಗಿರುವಾಗ ಅಬ್ದುಲ್ಲಾ ಬಿನ್ ಮಸ್‌ಊದರ ಒಳಿತುಗಳನ್ನು ಹೊಂದಿದ ಬೇರೆ ಒಬ್ಬನಿರಲು ಹೇಗೆ ತಾನೆ ಸಾಧ್ಯ?

ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರಿಗೆ ಸಂಬಂಧಿಸಿ ಬೇರೆ ಕೆಲವು ವರದಿಗಳೂ ಘಟನೆಗಳೂ ಇವೆ. ಅವುಗಳನ್ನು ಇನ್‌ಶಾಅಲ್ಲಾಹ್ ಮುಂದೆ ವಿವರಿಸುವೆನು. ಈ ಬೆಳಗುತ್ತಿರುವ ನಕ್ಷತ್ರಗಳ ನಡೆವಳಿಕೆಗಳನ್ನು ಅನುಸರಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್.

—————————*****—————————

***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh, London. On28-09-2018.*

**Summarized by***Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***:*khutuba.kannada@gmail.com*

**You can find all the Sermons archived at**: www.alislam.org/friday-sermon